ವರ್ಷ ಅವರನ್ನು ಕರೆ ತರುವ ವಿಷಯ ಯಾರಿಗೂ ಗೊತ್ತಾಗದಂತೆ ಗೌಪ್ಯವಾಗಿಟ್ಟು ಸಿದ್ದುವಿಗೂ ಗೌಪ್ಯವಾಗಿಡಲು ತಿಳಿಸಿದ್ದಳು. ವಸಂತಮ್ಮನ ಊರಿಗೆ ಹೋಗಿ ಊರಿನವರ ಸಹಾಯ ಪಡೆದು ಬೇರೆ ನಗರದಲ್ಲಿರುವ ವಸಂತಮ್ಮನ ತಮ್ಮ, ತಂಗಿಯರ ವಿಳಾಸ ಪಡೆದು, ಅವರ ಮನೆಗೆ ಹೋಗಿ ವಸಂತಮ್ಮನ ಸ್ಥಿತಿ ತಿಳಿಸಿ ಈಗಲೇ ಊರಿಗೆ ಬಂದು ಅವರನ್ನು ನೋಡಿಕೊಂಡು ಹೋಗಬೇಕೆಂದು ಕೇಳಿಕೊಂಡ. ಹಾಗೆಯೇ ತಾನು ಬಂದ ವಿಷಯವನ್ನು ಅವರಿಗೆ ತಿಳಿಸದೆ ನೀವಾಗಿಯೇ ಅವರನ್ನು ನೋಡಲು ಬಂದೆವೆಂದು ತಿಳಿಸಿ ಆ ತಾಯಿಯ ಕೊನೆಗಾಲದಲ್ಲಿಯಾದರೂ ತನ್ನವರು ಬಂದರೆಂಬ ತೃಪ್ತಿ ಸಿಗಲಿ ಅಂತ ಬೇಡಿಕೊಂಡ. ಅವನ ಮಾತುಗಳಿಗೆ ಇಲ್ಲವೆನ್ನಲಾರದೆ, ತಮ್ಮನ್ನು ಓದಿಸಿ, ಈ ಸ್ಥಿತಿಯಲ್ಲಿ ಬದುಕಲು ಕಾರಣಕರ್ತ ವಸಂತನೇ ಅನ್ನೋ ಕಾರಣಕ್ಕೋ ಅರೆಮನಸ್ಸಿನಿಂದಲೇ ಬರಲು ಒಪ್ಪಿ ಎಲ್ಲರೂ ಮಾತನಾಡಿಕೊಂಡು, ಒಟ್ಟಿಗೆ ಬರುತ್ತೇವೆ ಅಂತ ಮಾತು ಕೊಟ್ಟ ಮೇಲೆಯೇ ಸಿದ್ದು ಹೊರಟಿದ್ದು.

ಒಂದೇ ವಾರದಲ್ಲಿ ಅವರೆಲ್ಲ ವಸಂತಮ್ಮನ ಮನೆಗೆ ಬಂದರು. ತನ್ನವರನ್ನು ಕಂಡು ವಸಂತಮ್ಮನಿಗೆ ಸಂಭ್ರಮವೊ ಸಂಭ್ರಮ. ಅಕ್ಕ ಅನ್ನಬೇಕೊ, ಅಣ್ಣ ಅನ್ನಬೇಕೊ ಅನ್ನೋ ಗೊಂದಲದಲ್ಲಿ ಏನನ್ನೂ ಸಂಬೋಧಿಸದೆ ಆತ್ಮೀಯತೆಯೂ ಮೂಡದೆ, ಔಪಚಾರಿಕವಾಗಿ ಯೋಗಕ್ಷೇಮ ವಿಚಾರಿಸಿ, ತಾವು ತಂದ ಹಣ್ಣು ಹಂಪಲನ್ನು ಕೊಟ್ಟು, ಆರೋಗ್ಯದ ಕಡೆ ಹೆಚ್ಚಿನ ಗಮನವಿರಲಿ ಅಂತ ಹೇಳಿ ಹೊರಟೇ ಬಿಟ್ಟರು. ಅವರು ಹಾಗೆ ಹೋದರೂ ವಸಂತಮ್ಮನ ಮನಸ್ಸು ಆನಂದದಿಂದ ತೂಗುತ್ತಿತ್ತು. ಕೊನೆಗಾಲದಲ್ಲಾದರೂ ತನ್ನನ್ನು ನೆನೆಸಿಕೊಂಡು ತನ್ನ ಒಡಹುಟ್ಟಿದವರು ತನ್ನ ನೋಡಲು ಬಂದರಲ್ಲ ಅನ್ನೋ ಸಂತೋಷ, ತನ್ನವರು ತನಗಿದ್ದಾರೆ ಅನ್ನೊ ಸಮಾಧಾನ, ತಾನು ಅನಾಥೆಯಲ್ಲ ಅನ್ನೋ ನೆಮ್ಮದಿ ವಸಂತಮ್ಮನಿಗೆ ಸಿಕ್ಕಿತು. ಆ ಸಂತೋಷವನ್ನು ಅವಳ ಹೃದಯ ತಾಳಲಿಲ್ಲವೇನೊ, ಅವರು ಬಂದು ಹೋದ ವಾರದಲ್ಲಿಯೇ ಅವಳ ಆಯಸ್ಸು ಮುಗಿದಿತ್ತು. ವಸಂತಮ್ಮ ತನ್ನ ಬಿಟ್ಟು ಶಾಶ್ವತವಾಗಿ ಬಿಟ್ಟು ಹೋದಳೆಂದು ತಿಳಿದ ಕೂಡಲೇ ಹೆಚ್ಚು ಆಘಾತವಾದದ್ದು ವರ್ಷಳಿಗೆ. ಹೆತ್ತಮ್ಮ ವಾರಿಜ ಸತ್ತಾಗ ಅನಾಥಳಾಗಿದ್ದ ವರ್ಷ ಈಗ ಸಾಕು ಅಮ್ಮ ಸತ್ತಾಗ ಮತ್ತೊಮ್ಮೆ ಅನಾಥಳಾಗಿದ್ದಳು. ದುಃಖವನ್ನು ಭರಿಸಲಾರದೆ ಅದೆಷ್ಟು ಅತ್ತಳೊ... ಆದರೆ ಅಳುತ್ತಾ ಕೂರುವ ಸಮಯ ಇದಾಗಿರಲಿಲ್ಲ, ಮುಂದಿನ ಕಾರ್ಯವನ್ನು ಮಾಡಬೇಕಿತ್ತು. ಅವಳ ಒಡಹುಟ್ಟಿದವರಿಗೆ ವಿಷಯ ತಿಳಿಸಬೇಕಿತ್ತು. ಮನದ ತುಂಬಾ ನೋವು, ಸಂಕಟ, ವೇದನೆ, ದುಃಖ ಎಲ್ಲವನ್ನೂ ತುಂಬಿಕೊಂಡೇ ಸಜ್ಜಾದಳು. ಊರಿನವರು ಬಂದು ಮುಂದಿನ ಸಿದ್ಧತೆಗೆ ನೆರವಾಗತೊಡಗಿದರು. ಸಿದ್ದುವೇ ವಸಂತಮ್ಮನ ಸಾವಿನ ಸುದ್ದಿಯನ್ನು ಅವಳ ಒಡಹುಟ್ಟಿದವರಿಗೆ ತಿಳಿಸಿ, ಕೊನೆಯ ಕರ್ತವ್ಯ ಮಾಡಿ ಅಂತ ಕೇಳಿಕೊಂಡ. ವಸಂತಮ್ಮನ ಒಡಹುಟ್ಟಿದವರು ಮತ್ತೊಮ್ಮೆ ಈ ಊರಿಗೆ ಬರುವಂತಾಯಿತು. ಅಂತ್ಯಸಂಸ್ಕಾರ ಎಲ್ಲಿ, ಹೇಗೆ ಅಂತ ಚರ್ಚೆ ನಡೆಯಿತು. ಎಲ್ಲಿಯೇ ಹುಟ್ಟಿರಲಿ, ಎಲ್ಲಿಯೇ ಬೆಳೆದಿರಲಿ, ಆದರೆ ಬದುಕು ಕಟ್ಟಿಕೊಂಡಿದ್ದು ಇದೇ ಊರಿನಲ್ಲಿ, ನಮ್ಮ ಒಡಹುಟ್ಟಿದವಳಂತೆ ವಸಂತಮ್ಮ ಈ ಊರಿನ ಮಗಳೇ ಆಗಿದ್ದಾಳೆ. ಹಾಗಾಗಿ ಇಲ್ಲಿಯೇ ಅಂತ್ಯಸಂಸ್ಕಾರ ನಡೆಯಲಿ ಅಂತ ಗ್ರಾಮಸ್ಥರು ಅಭಿಪ್ರಾಯ ಪಟ್ಟಾಗ ಎಲ್ಲರೂ ಸಮ್ಮತಿಸಿದರು.

ವರ್ಷಳಿಗೆ ಒಂದು ಸಂದೇಹ ಕಾಡುತ್ತಿತ್ತು. ಅಮ್ಮನ ಅಂತ್ಯಸಂಸ್ಕಾರ ಮಂಗಳಮುಖಿಗಳ ಸಂಸ್ಕಾರದಂತೆ ನಡೆಸಬೇಕೊ ಅಥವಾ ಸಾಮಾನ್ಯರಂತೆ ನಡೆಸಬೇಕೊ ಅಂತ ಗೊಂದಲದಲ್ಲಿದ್ದಳು. ಆದರೆ ಇದುವರೆಗೂ ವಸಂತಮ್ಮನಾಗಲಿ, ತಾನಾಗಲಿ ಯಾವ ಮಂಗಳಮುಖಿಯರ ಸಂಪರ್ಕದಲ್ಲಿ ಇಲ್ಲ, ಅವರ ಆಚಾರ ವಿಚಾರ ತಿಳಿದು ಗೊತ್ತಿಲ್ಲ ವಿನಃ ನೋಡಿ, ಆಚರಿಸಿ ಗೊತ್ತಿರಲಿಲ್ಲ. ಈಗ ಅವರನ್ನು ಸಂಪರ್ಕಿಸಿ ಇಲ್ಲಿಗೆ ಕರೆಸಬೇಕಾಗುತ್ತದೆ. ಆದರೆ ಅವರನ್ನು ಸಂಪರ್ಕಿಸುವುದಾದರೂ ಹೇಗೆ? ಯಾರೊಬ್ಬರ ಫೋನ್ ನಂಬರ್ ಇಲ್ಲವಲ್ಲ ಅಂತ ಯೋಚಿಸಿದಳು. ಅಷ್ಟರೊಳಗೆ ಗ್ರಾಮಸ್ಥರು ತಮ್ಮೂರಿನ ಸಂಪ್ರದಾಯದಂತೆ ವಸಂತಮ್ಮನ ಸಂಸ್ಕಾರಕ್ಕೆ ಸಿದ್ಧತೆ ಮಾಡಿದರು. ಅದನ್ನು ನೋಡಿ ವರ್ಷ ಏನೂ ಹೇಳಲಾರದೆ ಸುಮ್ಮನಾದಳು. ಅಮ್ಮನನ್ನು ಮಣ್ಣಿಗಿಡುವಾಗ ಹತ್ತು ವರ್ಷದ ಹಿಂದಿನ ನೋವು ಮರುಕಳಿಸಿತ್ತು. ನಿಜವಾಗಿ ಇವತ್ತು ತಾನು ಸಂಪೂರ್ಣ ಅನಾಥೆ ಅನ್ನೋ ಭಾವ ಕಾಡಿ ಬಿಕ್ಕಿ ಬಿಕ್ಕಿ ಅತ್ತಳು. ವಸಂತಮ್ಮನನ್ನು ಮಣ್ಣುಮಾಡಿ ಎಲ್ಲರೂ ಮನೆಗೆ ಬಂದು ಸ್ನಾನ ಮಾಡಿ ದೀಪ ಹಚ್ಚಿಟ್ಟು ಬಂದವರಿಗಾಗಿ ಊಟಕ್ಕೆ ಸಿದ್ಧಪಡಿಸಿದ್ದರು.

ಎಲ್ಲರ ಊಟವಾದ ಮೇಲೆ, ಮುಂದೆ ವಸಂತಮ್ಮನ ಅಂಗಡಿ ನೋಡಿಕೊಳ್ಳುವವರು ಯಾರು ಅಂತ ಅವರವರೇ ಮಾತಾಡಿಕೊಂಡರು. ತಮ್ಮಲ್ಲಿಯೇ ಒಬ್ಬರು ಇಲ್ಲಿಯೇ ಇದ್ದು ನೋಡಿಕೊಳ್ಳುವುದು, ಹೇಗೂ ಆ ಹುಡುಗಿ ಇಲ್ಲಿಯೇ ಇರುತ್ತಾಳೆ, ಅವಳಿಗೆ ತಿಂಗಳಿಗೆ ಒಂದಿಷ್ಟು ಸಂಬಳ ಅಂತ ಕೊಟ್ಟರಾಯಿತು ಅಂತ ಮಾತನಾಡಿಕೊಳ್ಳುವುದನ್ನು ಕೇಳಿಸಿಕೊಂಡ ವರ್ಷ ಇಷ್ಟು ದಿನಗಳವರೆಗೆ ಈ ಮನೆಯ ಮಗಳಂತೆ ಇದ್ದು ಮುಂದೆ ಈ ಮನೆಯ ಆಳಾಗಿ ಇರಬೇಕೆ, ಬೇಡ ಇಲ್ಲಿಯ ಋಣ ಇವತ್ತಿಗೆ ತೀರಿತು, ಅಷ್ಟೆಲ್ಲ ಆಸ್ತಿಪಾಸ್ತಿ, ಅಪ್ಪ, ದೊಡ್ಡಪ್ಪ, ದೊಡ್ಡಮ್ಮ, ಅಕ್ಕಂದಿರ ಪ್ರೀತಿ, ವಾತ್ಸಲ್ಯ ಬಿಟ್ಟು ಬಂದ ನನಗೆ ಇದು ಯಾವ ಮಹಾ? ತಾಯಿಯಂತೆ ಪೊರೆದ ಅಮ್ಮನೇ ಇಲ್ಲವೆಂದ ಮೇಲೆ ಇಲ್ಲಿ ನಾನ್ಯಾಕೆ ಇರಬೇಕು ಅಂತ ನಿರ್ಧರಿಸಿಕೊಂಡು ಮನೆ ಬಿಟ್ಟು ಹೊರಡಲು ಸಿದ್ಧವಾದಳು ವರ್ಷ. ಬೆಳಿಗ್ಗೆ ತನ್ನ ಬಟ್ಟೆ ಬರೆ ತುಂಬಿಕೊಂಡು ಇಷ್ಟು ದಿನ ತನ್ನದಾಗಿದ್ದ ಮನೆಯನ್ನೂ, ಊರನ್ನು ಅಲ್ಲಿದ್ದ ಯಾರಿಗೂ ಹೇಳದೆ, ಇಷ್ಟು ವರ್ಷಗಳ ಕಾಲ ತಮ್ಮ ಪ್ರೀತಿಯನ್ನು, ಸ್ನೇಹವನ್ನೂ ಕೊಟ್ಟಿದ್ದ ಆ ಗ್ರಾಮದ ಯಾರೊಬ್ಬರಿಗೂ ಗೊತ್ತಾಗದಂತೆ, ಗೊತ್ತಾದರೆ ತನ್ನನ್ನು ಹೋಗಲು ಬಿಡುವುದಿಲ್ಲ ಅನ್ನೋ ಸತ್ಯ ಗೊತ್ತಿದ್ದರಿಂದ ಯಾರಿಗೂ ತಿಳಿಯದಂತೆ ಹೊರಟ ಬಿಟ್ಟಳು. ಎಲ್ಲಿಗೆ ಹೋಗಬೇಕೆಂಬ ಗುರಿ ಇಲ್ಲದೆ ಇದ್ದರೂ ಬೆಂಗಳೂರಿಗೆ ಹೋದರೆ ತನ್ನಂಥವರು ಅಲ್ಲಿ ಸಿಗುತ್ತಾರೆ, ಮುಂದೆ ಹೇಗೆ ನಡೆಯುವುದು ಹಾಗೆ ಬದುಕನ್ನು ನಡೆಸುವುದು ಅಂತ ತೀರ್ಮಾನಿಸಿಕೊಂಡಳು.

ಬೆಂಗಳೂರು ಬಸ್ಸು ಹತ್ತಿದ ವರ್ಷ ಅಲ್ಲಿ ಎಲ್ಲಿ ಹೋಗುವುದು ಅಂತ ಚಿಂತೆಯಿಲ್ಲದೆ ನೆಮ್ಮದಿಯಿಂದ ಕುಳಿತಿದ್ದಳು. ಬಸ್ಸು ಬೆಂಗಳೂರು ತಲುಪಿ ಟೋಲ್ ಹತ್ತಿರ ನಿಂತಾಗ, ಕಿಟಕಿಯಿಂದಲೇ ಕಾಣುತ್ತಿದ್ದ ಮಂಗಳಮುಖಿಯರನ್ನು ಕಂಡು ತನ್ನವರನ್ನೇ ಕಂಡಂತಾಗಿ ಖುಷಿಯಾಯಿತು. ಅವರು ನಿಂತಿದ್ದ ಕಾರುಗಳ ಕಿಟಕಿಗಳ ಬಳಿ ಬಗ್ಗಿ ಭಿಕ್ಷೆ ಬೇಡುತ್ತಿರುವುದು ಕಂಡು ಮನಕ್ಕೆ ಅಸಹನೆ ಮೂಡಿಸಿದರೂ ತನ್ನವರು ಅವರು ಅನ್ನೊ ಅಭಿಮಾನದಿಂದ, ತನ್ನ ಬದುಕು ಇನ್ನು ಮುಂದೆ ಅವರ ಜೊತೆ ಅಂತ ಆ ಕ್ಷಣದಲ್ಲಿಯೇ ನಿರ್ಧರಿಸಿಕೊಂಡು ತನ್ನ ಬ್ಯಾಗನ್ನು ಹಿಡಿದುಕೊಂಡು ಇಳಿದುಬಿಟ್ಟಳು. ಇಳಿದವಳೇ ಒಂದು ಕ್ಷಣ ಏನೂ ತೋಚದೆ ಅಲ್ಲಿಯೇ ನಿಂತುಬಿಟ್ಟಳು. ಹೇಗೆ ಹೋಗಿ ಅವರನ್ನು ಮಾತನಾಡಿಸುವುದು, ಅವರು ತನ್ನನ್ನು ತಮ್ಮವಳೆಂದು ಒಪ್ಪಿಕೊಳ್ಳುತ್ತಾರೆಯೇ, ಅಪರಿಚಿತಳೆಂದು ತಳ್ಳಿಬಿಟ್ಟರೆ, ಗೊಂದಲದಲ್ಲಿ ಮುಳುಗಿ ನಿಧಾನವಾಗಿ ಅಲ್ಲಿದ್ದ ಕ್ಯಾಂಟೀನಿನತ್ತ ನಡೆದಳು.

ಬೆಳಿಗ್ಗೆಯಿಂದ ಏನೂ ತಿಂದಿರಲಿಲ್ಲ, ಏನೂ ಕುಡಿದಿರಲಿಲ್ಲ. ಚಿಂತೆಯಲ್ಲಿದ್ದವಳಿಗೆ ಹಸಿವು, ನೀರಡಿಕೆ ಕಾಣಿಸಿರಲೇ ಇಲ್ಲ, ಕ್ಯಾಂಟೀನ್ ಕಂಡ ಕೂಡಲೇ ಹಸಿವು ಭುಗ್ಗನೆದ್ದಿತು. ಕ್ಯಾಂಟೀನ್ ಒಳ ಹೋಗಿ ಕುಳಿತು ಅಲ್ಲಿದ್ದ ಏಕೈಕ ತಿಂಡಿ ಚಿತ್ರಾನ್ನವನ್ನು ಕಷ್ಟಪಟ್ಟು ತಿಂದು ಕಾಫಿ ಕುಡಿದಳು. ದುಡ್ಡು ಕೊಟ್ಟು ಹೊರಬಂದವಳಿಗೆ ಮತ್ತೆ ಚಿಂತೆ ಕಾಡಿತು. ಎಷ್ಟೊ ಹೊತ್ತು ಅಲ್ಲಿಯೇ ನಿಂತಳು. ತನ್ನವರನ್ನು ಹೇಗೆ ಮಾತನಾಡಿಸುವುದು ಅಂತ ಯೋಚಿಸುತ್ತಿರುವಾಗಲೇ, ತನ್ನವರ ಗುಂಪು ಇತ್ತ ಬಂದಾಗ ಹಿಗ್ಗಿದಳು. ಅವರು ಹತ್ತಿರ ಬರುತ್ತಿದ್ದಂತೆ ತಾನೇ ಮುಂದೆ ಹೋಗಿ 'ಅಕ್ಕ ನಾನು ವರ್ಷ ಅಂತಾ...' ಮುಂದಕ್ಕೆ ಏನೂ ಹೇಳದಂತೆ ಅಲ್ಲಿದ್ದವರಲ್ಲಿ ಸ್ವಲ್ಪ ಹಿರಿಯಳಾದ ಒಬ್ಬಾಕೆ 'ಮನೆ ಬಿಟ್ಟು ಬಂದಿದ್ದೀಯಾ ಅಲ್ವಾ, ಇರೋದು ಎಲ್ಲಿ ಅಂತ ಚಿಂತೆ ಮಾಡ್ತಾ ಇದ್ದೀಯಾ, ನೀನು ಬಸ್ಸು ಇಳಿದಾಗಲೇ ನಮ್ಮಂಥವಳೇ ಅಂತ ಗೊತ್ತಾಗಿಹೋಯ್ತು, ನೋಡೋಣ ಅಂತ ಇದ್ವಿ, ಇನ್ನು ಮೇಲೆ ನಮ್ಮ ಜೊತೆಗೆ ಇರುವಂತೆ' ಅಂದಾಗ ತಲೆ ಮೇಲಿದ್ದ ದೊಡ್ಡ ಹೆಬ್ಬಂಡೆ ಕರಗಿ ಹೋದಂತಾಗಿ ನೆಲೆ ಸಿಕ್ಕಿದ ಸಂತೋಷದಲ್ಲಿ ಅವಳನ್ನು ತಬ್ಬಿಕೊಂಡಳು. ಅವಳನ್ನು ತಾವು ಇದ್ದ ಮನೆಯತ್ತ ಕರೆದೊಯ್ದು ಮನೆ ತೋರಿಸಿ 'ಇನ್ನು ಮೇಲೆ ನೀನು ಇಲ್ಲಿಯೇ ಇರಬಹುದು, ನಾವು ಏನು ಮಾಡುತ್ತೇವೆಯೋ, ನೀನೂ ಅದನ್ನೇ ಮಾಡಿಕೊಂಡು ನಮ್ಮಲ್ಲಿ ಒಬ್ಬಳಾಗಿ ಇರುವಿಯಂತೆ. ಈ ಮನೆಗೆ ಬಾಡಿಗೆ ಕೊಡಬೇಕು, ರೇಷನ್ ತರಬೇಕು, ಮನೆಯ ಎಲ್ಲ ಖರ್ಚನ್ನು